1

ವಿಜಯ ಕರ್ನಾಟಕ/ಹುಬ್ಬಳ್ಳಿ
VIJAYA KARNATAKA HUBBALLI
26 MAY 2019

# ಹಲವು ರೈಲು ಸಂಚಾರದಲ್ಲಿ ವ್ಯತ್ಯಯ

## ಜೋಡಿಹಳಿ ಕಾಮಗಾರಿ

■ **ಸಂತೋಷ್ ಕಬ್ಬೂರು** ದಾವಣಗೆರೆ

ರೈಲ್ವೆ ಹಳಿ ಡಬ್ಲಿಂಗ್ ಕಾಮಗಾರಿ ನಡೆಯುತ್ತಿರುವ ಕಾರಣ ರೈಲು ಸಂಚಾರದಲ್ಲಿ ವ್ಯತ್ಯಯವಾಗಲಿದೆ. ಕೆಲ ರೈಲುಗಳು ಸ್ಥಗಿತಗೊಳ್ಳಲಿದ್ದು, ಕೆಲ ರೈಲುಗಳ ಸಮಯ ವ್ಯತ್ಯಾಸ, ಮಾರ್ಗ ಬದಲಾವಣೆಯನ್ನೂ ಮಾಡಲಾಗಿದೆ.

ತುಮಕೂರು -ಮಲ್ಲಸಂದ್ರ - ಗುಬ್ಬಿ ಮಾರ್ಗದ ನಡುವೆ ಜೋಡುಹಳಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ಇದರಿಂದಾಗಿ ಕೆಲ ರೈಲುಗಳ ಸಂಚಾರ ಸ್ಥಗಿತಗೊಂಡರೆ, ಕೆಲವು ಮಾರ್ಗ ಬದಲಾವಣೆಗೊಂಡಿವೆ. ಇನ್ನು ಕೆಲ ರೈಲುಗಳು ನಿಗದಿತ ಸಮಯಕ್ಕಿಂತ ಅರ್ಧ ಗಂಟೆಯಿಂದ ಎರಡು ತಾಸು ವಿಳಂಬವಾಗಿ ಸಂಚರಿಸಲಿವೆ.

**ಪ್ಯಾಸೆಂಜರ್, ಇಂಟರ್‌ಸಿಟಿ ರದ್ದು:** ಡಬ್ಲಿಂಗ್ ಕಾಮಗಾರಿಯಿಂದ ಹರಿಹರ-ಬೆಂಗಳೂರು ಇಂಟರ್‌ಸಿಟಿ ಮೇ 29ರಂದು ಇರುವುದಿಲ್ಲ. ನಿತ್ಯ ರಾತ್ರಿ 8.10ಕ್ಕೆ ಬರುವ ಚಿತ್ರದುರ್ಗ- ಹರಿಹರ ಪ್ಯಾಸೆಂಜರ್ ರೈಲು ಗುರುವಾರದಿಂದಲೇ ಸ್ಥಗಿತಗೊಂಡಿದ್ದು, ಮೇ 29ರವರೆಗೂ ಸಂಚಾರ ಇರುವುದಿಲ್ಲ.

**ಮಾರ್ಗ ಬದಲಾವಣೆ:** ಬೆಂಗಳೂರು-ಹುಬ್ಬಳ್ಳಿ ಪ್ಯಾಸೆಂಜರ್ ರೈಲು, ವಿಶ್ವಮಾನವ ಎಕ್ಸ್‌ಪ್ರೆಸ್ ಗುರುವಾರದಿಂದ ಮಾರ್ಗ ಬದಲಿಸಿದ್ದು, ಮೇ 29ರವರೆಗೆ, ವಾಸ್ಕೋ ಯಶವಂತಪುರ ಎಕ್ಸ್‌ಪ್ರೆಸ್ ಮೇ 28 ರಂದು, ಧಾರವಾಡ-ಬೆಂಗಳೂರು ಎಕ್ಸ್‌ಪ್ರೆಸ್ ಮೇ 28 ಮತ್ತು 29ರಂದು, ಉದಯಪುರ್ ಮೈಸೂರು ಎಕ್ಸ್‌ಪ್ರೆಸ್ ರೈಲು ಮೇ 27ರಂದು ಮಾರ್ಗ ಬದಲಾಯಿಸಲಿವೆ. ಈ ಎಲ್ಲ ರೈಲುಗಳು ತುಮಕೂರು, ತಿಪಟೂರು ಮಾರ್ಗ ಬಿಟ್ಟು, ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸವೆ ಎನ್ನುತ್ತಾರೆ ರೈಲ್ವೆ ಸ್ಟೇಷನ್ ವ್ಯವಸ್ಥಾಪಕ ಎಚ್.ಜಿ.ಮುರುಗೇಂದ್ರಪ್ಪ.



ತುಮಕೂರು ಮತ್ತು ಗುಬ್ಬಿ ಮಾರ್ಗದಲ್ಲಿ ಜೋಡಿಹಳಿ ಕಾಮಗಾರಿ ನಡೆಯುತ್ತಿರುವುದರಿಂದ ರೈಲುಗಳ ಸಂಚಾರದಲ್ಲಿ ವ್ಯತ್ಯಾಸವಾಗಲಿದೆ. ಮೇ 29ರಂದು ಈ ಕಾಮಗಾರಿ ಪೂರ್ಣಗೊಳ್ಳಲಿದ್ದು, ಮೇ 30ರಿಂದ ರೈಲುಗಳು ಯಥಾಸ್ಥಿತಿಯಲ್ಲಿ ಸಂಚರಿಸಲಿವೆ.

**- ಎಚ್.ಜಿ. ಮುರುಗೇಂದ್ರಪ್ಪ,**
ರೈಲ್ವೆ ಸ್ಟೇಷನ್ ವ್ಯವಸ್ಥಾಪಕ, ದಾವಣಗೆರೆ

## ವಿಳಂಬವಾಗುವ ರೈಲುಗಳು

**ಬೆಂಗಳೂರು ಧಾರವಾಡ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲು ಮೇ 28ರವರೆಗೂ ಒಂದು ತಾಸು ವಿಳಂಬವಾಗಿ ಬರಲಿದೆ. ಹುಬ್ಬಳ್ಳಿ ಕೋಚಿವೀರ ಎಕ್ಸ್‌ಪ್ರೆಸ್ ರೈಲು ಮೇ 29ರಂದು ಎರಡು ತಾಸು, ಹುಬ್ಬಳ್ಳಿ ಅಶೋಕಪುರಂ ಎಕ್ಸ್‌ಪ್ರೆಸ್ ಮೇ 27ರಂದು ಬೆಂಗಳೂರಿಗೆ 1 ತಾಸು, ವೇಲಾಂಗನಿ ವಾಸ್ಕೋ ಎಕ್ಸ್‌ಪ್ರೆಸ್ ಮೇ 29ರಂದು ಬೆಂಗಳೂರಿನಿಂದ ದಾವಣಗೆರೆ 45 ನಿಮಿಷ, ವಾಸ್ಕೋ - ಯಶವಂತಪುರ ಎಕ್ಸ್‌ಪ್ರೆಸ್ ಮೇ 25, 27ರಂದು ಬೆಂಗಳೂರಿನಿಂದ ದಾವಣಗೆರೆ ಒಂದು ತಾಸು ವಿಳಂಬವಾಗಿ ಸಂಚರಿಸಲಿವೆ. ಇದಕ್ಕೆ ಕಾರಣ ಬೆಂಗಳೂರು -ಹುಬ್ಬಳ್ಳಿ ಮಾರ್ಗದ ಮಧ್ಯೆ ಜೋಡಿಹಳಿ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.**

RAJASTHAN PATRIKA / HUBBALLI
राजस्थान पत्रिका / हुब्बल्लि
26 MAY 2019

# 3 ट्रेनें आंशिक निरस्त

बेंगलूरु. दक्षिण पश्चिम रेलवे के बेंगलूरु रेल मंडल के तुमकूरु में नॉन इंटरलॉकिंग व तुमकूरु, मल्लसन्द्रा व गुब्बी स्टेशनों के बीच रेल लाइन दोहरीकरण के कारण ट्रेन 56221/56222, 56225/56226 और 56925/56926 केएसआर बेंगलूरु-तुमकूरु पैसेंजर 26 और 27 मई को हिरेहल्ली और तुमकूरु के बीच आंशिक रूप से रद्द रहेगी।

## PARTIAL CANCELLATION OF TRAINS

Following trains will be Partially cancelled due to safety related maintenance and doubling work between Tumakuru – Gubbi over Bengaluru Division and Alnavar – Devarayi over Hubballi Division as detailed below: -

Train No. 16589 KSR Bengaluru –Shri Chhatrapati Shahu Maharaj Terminus Kolhapur Daily Express commencing journey from **28.05.2019 to 03.06.2019** will be partially cancelled between Miraj - Shri Chhatrapati Shahu Maharaj Terminus Kolhapur. Accordingly, this train will terminate at Miraj,Train No. 16590 Shri Chhatrapati Shahu Maharaj Terminus Kolhapur - KSR Bengaluru Daily Express commencing journey **from 29.05.2019 to 04.06.2019** will be partially cancelled between Shri Chhatrapati Shahu Maharaj Terminus Kolhapur -Miraj. Accordingly, this train wills originate from Miraj.

Scanned by CamScanner